Seventh Annual Report and Accounts of the Bangalore Animal Food Corporation Limited for the year ended 31st March, 1981.

as required under Section 619 A (3) of the Companies Act 1956.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಬಿಜಾಪುರದ ಬಗ್ಗೆ ಹೇಳಿಕೆ ಕೊಡುತ್ತೇವೆಂದು ಹೇಳಿದ್ದರು. ಅದೇ ರೀತಿ ಗಲ್ಫ್, ಅರಬ್ ರಾಷ್ಟ್ರಗಳಲ್ಲಿ ಉದ್ಯೋಗ ಕೊಡಿಸುತ್ತೇವೆಂದು ನ್ಯಾಷನಲ್ ಮತ್ತು ಸೀಮಾ ಏಜೆನ್ಸಿಯವರು ಮಾಡಿರುವ ವಂಚನೆ ಪ್ರಕರಣದ ಬಗ್ಗೆಯೂ ಹೇಳಿಕೆ ಕೊಡುತ್ತೇವೆಂದು ಹೇಳಿದ್ದರು. ಆದರೂ ಕೊಡಲಿಲ್ಲ. ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಅಮಿನಾನ್ ಸೇಠ್ ಎಂಬುವರು ಅರೆಸ್ಟ್ ಆಗಿದ್ದಾರೆ. ಈ ವಿಷಯ ಮೇಲಿನ ಸದನದಲ್ಲೂ ಬಂದಿದೆ. ಅಲ್ಲಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದರೂ ಕಿಳಮನೆಯಲ್ಲಿ ಇದುವರೆಗೂ ಹೇಳಿಕೆ ಕೊಟ್ಟಿಲ್ಲ. ನೂರಾರು ಮಂದಿ ಹಣ ಕಳೆದುಕೊಂಡು ಬೀದಿಯಲ್ಲಿದ್ದಾರೆ. ಅವರಿಗೆ ಪರಿಹಾರ ಇಲ್ಲ. ಆದ್ದರಿಂದ ಸರ್ಕಾರದವರು ಯಾವಾಗ ಹೇಳಿಕೆ ಕೊಡುತ್ತಾರೆ ಎಂಬುದನ್ನು ಹೇಳಬೇಕು ಮತ್ತು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ರಘುಪತಿ.—ಇವತ್ತೇ ಹೇಳಿಕೆ ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಗುಲ್ಬರ್ಗ ಎಂ.ಎಸ್.ಕೆ. ಮಿಲ್ಸ್ ಕಾರ್ಮಿಕರ ಮುಷ್ಕರದ ಬಗ್ಗೆ ನೋಟೀಸ್ ಕೊಟ್ಟು ೮೦ ದಿವಸ ಆಯಿತು.

ಉಪಾಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ಮುಗಿಯಲಿ.

ಶ್ರೀ ಎಂ. ರಘುಪತಿ.—ಎಂ.ಎಸ್.ಕೆ. ಮಿಲ್ ಬಗ್ಗೆ ೧೨ನೇ ತಾರೀಖು ಲೇಬರ್ ಕಮಿಷನರ್ ಎದುರುಗಡೆ ಕನ್‌ಸಿಲಿಯೇಷನ್ ನಡೆಯುತ್ತಿದೆ. ಅದು ಪೂರ್ತಿಯಾದ ನಂತರ ಅದೂ ವಿಫಲವಾದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಬೇಡಿಕೆಗೆ ಉತ್ತರ ಕೊಡುವಾಗ ಹೇಳಿದ್ದೇನೆ.

ಶ್ರೀ ಮಲ್ಲಾರಗೌಡ ಪಾಟೀಲ್.—ನಾನು ಸಂಕೇಶ್ವರದ ಬಗ್ಗೆ ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ.. ಅದು ಬರಲಿಲ್ಲ.

ಉಪಾಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮುಗಿಯಲಿ.

CALLING ATTENTION TO A MATTER OF URGENT PUBLIC IMPORTANCE

ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೆ, ಜನತೆ ಉಪಯೋಗಿಸತಕ್ಕ ವನಸ್ಪತಿಯಲ್ಲಿ ದನದ ಕೊಬ್ಬನ್ನು ಮಿಶ್ರ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಹೇಳಿಕೆಯನ್ನು ಸಭೆಯ ಮುಂದೆ ಇಡಬಯಸುತ್ತೇನೆ.

"ಜೈನ್ ಶುದ್ಧ ವನಸ್ಪತಿ ಕಂಪೆನಿಯವರು ವನಸ್ಪತಿಗೆ ದನದ ಕೊಬ್ಬನ್ನು ಕಲಬೆರಕೆ ಮಾಡಿ ಮಾರುತ್ತಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ಈ ಬಗ್ಗೆ ಯಾವುದೇ ವ್ಯಕ್ತಿಯಿಂದಾಗಲಿ ಅಥವಾ ಸಂಸ್ಥೆಯಿಂದಾಗಲೀ ನಿರ್ದಿಷ್ಟವಾದ ದೂರು ಬಂದಿಲ್ಲ. ಹಾಗೂ ರಾಜ್ಯದ ಯಾವುದೇ ಪ್ರಯೋಗ ಶಾಲೆಗಾಗಲೀ ಅಥವಾ ಬೆಂಗಳೂರು ನಗರ ಸಭೆಯ ಪ್ರಯೋಗ ಶಾಲೆಗಾಗಲೀ ಪರೀಕ್ಷೆಗಾಗಿ ವನಸ್ಪತಿಯ ಮಾದರಿಯು ಬಂದಿಲ್ಲ. ಆದರೂ ಸಹ ದಿನಾಂಕ ೧೯ನೇ ಸೆಪ್ಟೆಂಬರ್ ೧೯೮೩ರಂದು ರಾಜ್ಯದ ಸಂಬಂಧಪಟ್ಟ ಎಲ್ಲಾ ಆಹಾರ ಕಲಬೆರಕೆ ಕಾಯಿದೆ ನಿಯಂತ್ರಣಾಧಿಕಾರಿಗಳಿಗೆ ಅನುಮಾನಾಸ್ಪದ ವನಸ್ಪತಿ ಕಲಬೆರಕೆ ಬಗ್ಗೆ ಎಚ್ಚರಿಕೆಯಿಂದಿರಲು ವಿಶೇಷ ಸುತ್ತೋಲೆಯನ್ನು ಕಳುಹಿಸಲಾಗಿದೆ.

ವನಸ್ಪತಿ ಕಲಬೆರಕೆ ಬಗ್ಗೆ ಯಾವುದಾದರೂ ನಿರ್ದಿಷ್ಟ ದೂರು ಸರಕಾರದ ಗಮನಕ್ಕೆ ಬಂದಲ್ಲಿ ಅಂತಹವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು."